ಆ) ಹಾಗಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡ ಕ್ರಮವೇನು? ತೆಗೆದುಕೊಂಡ ಕ್ರಮ ಕಾರ್ಯ ರೂಪಕ್ಕೆ ಎಂದಿನಿಂದ ಬರುತ್ತದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

ಅ) ಹೌದು

ಆ) ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

ಕೊಡಗು ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಾಲಯಗಳು

1356 (1570) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕೊಡಗು ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಾಲಯಗಳು ಸಂಖ್ಯೆ ಎಷ್ಟು?

2) ಆ ದೇವಾಲಯಗಳಿಗೆ ಸರ್ಕಾರದಿಂದ ಎಷ್ಟು ಹಣ ಬಿಡುಗಡೆಯಾಗಿದೆ.

3) ಅದರಿಂದ ಸರ್ಕಾರದ ಬೊಕ್ಕಸಕ್ಕೆ ಬರುವ ವರ ಮಾನವೆಷ್ಟು?

ಶ್ರೀ ಬಾಬುರಾವ್ ಚಿಂಚನಸೂರ (ಮುಜರಾಯಿ ರಾಜ್ಯ ಸಚಿವರು) :

1) ಕೊಡಗು ಜಿಲ್ಲೆಯಲ್ಲಿ ಒಟ್ಟು 7 ದೇವಾಲಯಗಳು ಮುಜರಾಯಿ ಇಲಾಖೆಗೆ ಸೇರಿರುತ್ತದೆ.

2) ಪ್ರತಿ ವರ್ಷ ರೂ.40000-00 ನಗದು ಅನುದಾನ ಸರ್ಕಾರದಿಂದ ಬಿಡುಗಡೆ ಮಾಡಲಾಗುತ್ತಿದೆ.

3) ಈ ದೇವಾಲಯಗಳಿಂದ ಯಾವುದೇ ವರಮಾನ ಸರ್ಕಾರಕ್ಕೆ ಬರುವುದಿಲ್ಲ. ಆಯಾ ದೇವಾಲಯಗಳಿಂದ ನಿತ್ಯಕಟ್ಲೆ ಹೆಚ್ಚು ಕಟ್ಲೆ ದೇವಲಾಯದ ನೌಕರರಿಗೆ ಸಂಬಳ ಕೊಡಲು ಹಾಗೂ ಅಭಿವೃದ್ಧಿ ಕಾರ್ಯಕ್ಕೆ ಉಪಯೋಗಿಸಲಾಗಿವುದು.

ಗೃಹ ಇಲಾಖೆಯಲ್ಲಿ ಪೇದೆ ಮತ್ತು ಮುಖ್ಯ ಪೇದೆಗಳಿಗೆ ಬಡ್ತಿ

1358 (1572) ಶ್ರೀ ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೃಹ ಇಲಾಖೆಯಲ್ಲಿ ಪೇದೆ ಮತ್ತು ಮುಖ್ಯ ಪೇದೆಗಳಿಗೆ ಯಾವ ಮಾನದಂಡದ ಆಧಾರದ ಮೇಲೆ

3) ಯೋಜನೆಯ ವೆಚ್ಚವನ್ನು ನಗರಸಭೆ, ಪುರಸಭೆ ಹಾಗೂ ಸರ್ಕಾರವು ಹಂಚಿಕೊಂಡು ಭರಿಸ ಬೇಕಾಗುತ್ತದೆ. ಈ ಯೋಜನೆಗೆ ತಗಲುವ ವೆಚ್ಚ ಹಾಗೂ ಯೋಜನೆಯ ಮುಕ್ತಾಯದ ದಿನಾಂಕ ಮುಂತಾದ ವಿವರಗಳು ಸರ್ಕಾರದಲ್ಲಿ ಇತ್ಯರ್ಥದ ಹಂತದಲ್ಲಿದೆ.

ಉತ್ತರಹಳ್ಳಿಯಲ್ಲಿ ಹಸಿರು ಕಾರ್ಡ್ ಮತ್ತು ಹಳದಿ ಕಾರ್ಡ್‌ಗಳ ಕುರಿತು

1353 (1567) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರಹಳ್ಳಿ ವಿಧಾನಸಭೆ ಕ್ಷೇತ್ರದಲ್ಲಿ ಹಸಿರು ಮತ್ತು ಹಳದಿ ಕಾರ್ಡುಗಳು ಬೇಕೆಂದು ಬಂದ ಅರ್ಜಿಗಳೆಷ್ಟು;

ಆ) ಇದರಲ್ಲಿ ಎಷ್ಟು ಜನರಿಗೆ ಇದುವರೆಗೆ ನೀಡಲಾಗಿದೆ;

ಇ) ಉಳಿದವರಿಗೆ ಯಾವಾಗಾ ವಿತರಣೆ ಮಾಡಲಾಗುವುದು; ವಿಳಂಬಕ್ಕೆ ಕಾರಣಗಳೇನು?

ಶ್ರೀ ಡಿ.ಬಿ. ಇನಾಂದರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :

ಅ) ದಿನಾಂಕ 29.2.2000ದ ಅಂತ್ಯಕ್ಕೆ ಪಡಿತರ ಚೀಟಿ ಕೋರಿ ಬಂದ ಅರ್ಜಿಗಳ ಸಂಖ್ಯೆ 42188.

ಆ) ನೀಡಿದ ಹಸಿರು ಕಾರ್ಡುಗಳು 11693

ನೀಡಿದ ಕೇಸರಿ ಕಾರ್ಡುಗಳು 22500

ಒಟ್ಟು **34193**

ಇ) ಸರ್ಕಾರವು ಇತ್ತೀಚೆಗೆ ಆದೇಶ ಸಂಖ್ಯೆ ಎಫ್‌ಸಿಎಸ್ 5 ಡಿಆರ್‌ಎ 2000 ದಿನಾಂಕ 1.2.2000ದಲ್ಲಿ ಹಸಿರು ಕಾರ್ಡು ಸೇರಿದಂತೆ ಇತರೆ ಕಾರ್ಡುಗಳನ್ನು ನೀಡುವ ಬಗ್ಗೆ ಸರಳೀಕೃತ ಮಾರ್ಗಸೂಚಿಗಳನ್ನು ಹೊರಡಿಸಿದೆ. ಅರ್ಜಿ ಜೊತೆಯಲ್ಲಿ ನೀಡಬೇಕಾದ ದಾಖಲೆಗಳನ್ನು ಸಹ ಸ್ಪಷ್ಟವಾಗಿ ತಿಳಿಸಲಾಗಿದೆ. ಹಸಿರು ಕಾರ್ಡು ಪಡೆಯಬೇಕೆಂದಿರುವವರು, ಇತರೆ ದಾಖಲೆಗಳ ಜೊತೆಗೆ ಸಂಬಂಧಿಸಿದ ಅಧಿಕಾರಿಗಳಿಂದ ಆದಾಯ ಪ್ರಮಾಣ ಪತ್ರವನ್ನು ನೀಡಬೇಕಾಗಿರುತ್ತದೆ. ಜಿಲ್ಲೆಗಳ ಕಛೇರಿಗಳಲ್ಲಿರುವ ಬಾಕಿ ಇರುವ ಅರ್ಜಿಗಳನ್ನು ಸೇರಿದಂತೆ ಹೊಸದಾಗಿ ಸೂಚಿಸಿರುವ ಮಾರ್ಗ ಸೂಚಿಗಳ ಅನುಸಾರ 30 ದಿನಗಳೊಳಗಾಗಿ ಅರ್ಜಿಗಳನ್ನು ವಿಲೇವಾರಿ ಮಾಡಲು ಈಗಾಗಲೇ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದ್ದು, ಅರ್ಹರಿಗೆ ಪಡಿತರ ಚೀಟಿಗಳನ್ನು ಸಹ ನೀಡಲು ತಿಳಿಸಿದೆ.

ಈ ಹಿಂದೆ ಹಸಿರು ಪಡಿತರ ಚೀಟಿಗಾಗಿ ಅರ್ಜಿಗಳನ್ನು ನೀಡಲು ಸಮಯ ನಿಗದಿಪಡಿಸಲಾಗುತ್ತಿತ್ತು. ಆ ಸಮಯದಲ್ಲಿ ಸಾವಿರಾರು ಸಂಖ್ಯೆಗಳಲ್ಲಿ ಅರ್ಜಿಗಳು ಬರುತ್ತಿದ್ದು ಕೆಲವೊಮ್ಮೆ ವಿಳಂಬವಾಗುತ್ತಿತ್ತು. ಈಗ ಸರಳೀಕೃತ ಮಾರ್ಗ ಸೂಚಿಗಳನ್ನು ನೀಡಿದ್ದು, ಅರ್ಜಿ ಸಲ್ಲಿಸಿದ 30 ದಿನಗಳೊಳಗಾಗಿ ಪಡಿತರ ಚೀಟಿಯನ್ನು ನೀಡುವ ಬಗ್ಗೆ ನಿರ್ಣಯ ಕೈಗೊಳ್ಳಲಾಗುತ್ತಿದೆ. ಬಡ್ತಿ ನೀಡುತ್ತೀರಿ

ಅ) ಪದವೀಧರ ಮುಖ್ಯ ಪೇದೆಗಳಿಗೆ ಯಾವ ಮಾನದಂಡದ ಮೇಲೆ ಬಡ್ತಿ ನೀಡುತ್ತೀರಿ;

ಇ) ಪದವೀದರನಾಗಿದ್ದು 20-25 ವರ್ಷ ಸೇವೆಸಲ್ಲಿಸಿದ್ದು 40 ವರ್ಷ ವಯಸ್ಸು ದಾಟಿದರೂ ಇನ್ನು ಬಡ್ತಿ ನೀಡದಿರಲು ಕಾರಣವೇನು;

ಈ) ಪಿ.ಎಸ್.ಐ. ಪರೀಕ್ಷೆಯಲ್ಲಿ ಪಾಸಾದರೂ ಬಡ್ತಿ ನೀಡದಿರಲು ಕಾರಣವೇನು ವಿವರ ಕೊಡಿ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ಪೋಲೀಸ್ ಪೇದೆಗಳಿಗೆ ಮತ್ತು ಮುಖ್ಯಪೇದೆಗಳಿಗೆ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಮುಂಬಡ್ತಿ ನೀಡಲಾಗುತ್ತದೆ. ಅದಲ್ಲದೆ ಅವರ ಮುಂಬಡ್ತಿ ಹೊಂದಲು ಸತತವಾಗಿ ಎಂಟು ವರ್ಷಗಳ

ಸೇವೆಯನ್ನು ಸಲ್ಲಿಸಿರಬೇಕು, ಆದರೆ ಎಂಟು ವರ್ಷಗಳ ಸೇವೆ ಸಲ್ಲಿಸಿದವರು ಇಲ್ಲದ ಪಕ್ಷದಲ್ಲಿ ಕನಿಷ್ಠ ಸತತವಾಗಿ 5 ವರ್ಷಗಳ ಸೇವೆ ಸಲ್ಲಿಸಿದವರನ್ನು ಮುಂಬಡ್ತಿಗೆ ಪರಿಗಣನೆಗೆ ತೆಗೆದು ಕೊಳ್ಳಲಾಗುವುದು.

2) ಮುಂಬಡ್ತಿ ನೀಡುವಾಗ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟ ಕೋಟಾವನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದು.

3) ಅವರ ವಾರ್ಷಿಕ ಗೋಪ್ಯ ವರದಿಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಆ) ಮತ್ತು ಇ) ಮುಂಬಡ್ತಿಯನ್ನು ನೀಡಲು ಜೇಷ್ಠತಾ ಪಟ್ಟಿಯನ್ನು ಅನುಸರಿಸಲಾಗುತ್ತಿದೆ. ಮುಖ್ಯ ಪೇದೆಗಳಿಗೆ ಬಡ್ತಿ ನೀಡುವಾಗ ಪದವೀಧರರಾಗಿರುವುದು ಅಥವಾ 40 ವರ್ಷ ವಯಸ್ಸಾಗಿರುವುದನ್ನು ಗಣನೆಗೆ ತೆಗೆದುಕೊಳ್ಳಲು ನಿಯಮದ ಅಡಿಯಲ್ಲಿ ಅವಕಾಶವಿರುವುದಿಲ್ಲ.

ಈ) ಪಿ.ಎಸ್.ಐ.ಗಳನ್ನು ಆಯ್ಕೆ ಮಾಡಲು ನಿಗಧಿ ಪಡಿಸಿದ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ತೋರುವ ಸಾಮರ್ಥ್ಯದ ಆಧಾರದ ಮೇಲೆ ಅವರನ್ನು ಪಿ.ಎಸ್.ಐ.ಗಳನ್ನಾಗಿ ನೇಮಕ ಮಾಡಲಾಗುತ್ತದೆ.

ಕೊಡಗು ಜಿಲ್ಲೆ ಸೋಮವಾರ ಪೇಟೆ ತಾಲ್ಲೂಕಿನ ಚಿಕ್ಲ ಹೊಳೆ ಜಲಾಶಯಕ್ಕೆ ಹಣ ಬಿಡುಗಡೆ

1359 (1573) ಶ್ರೀ ಅಪ್ಪಚ್ಚು ರಂಜನ್.ಎಂ.ಪಿ.(ಸೋಮವಾರಪೇಟೆ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ. ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕಿನ ಚಿಕ್ಲಿಹೊಳೆ ಜಲಾಶಯಕ್ಕೆ ಎಷ್ಟು ಹಣ ಬಿಡುಗಡೆಯಾಗಿದೆ ;

ಆ) ಎಷ್ಟು ಖರ್ಚಾಗಿದೆ ;

ಇ) ಈ ಕಾಮಗಾರಿ ಪೂರ್ಣಗೊಂಡಿದೆಯೇ;

ಈ) ಇನ್ನು ಎಷ್ಟು ಕಾಮಗಾರಿ ಬಾಕಿ ಇದೆ ;

ಉ) ಮಂಜೂರಾದ ಹಣದಲ್ಲಿ ಎಷ್ಟು ಬಾಕಿ ಇದೆ? (ವಿವರಣೆ ಕೊಡಿ)

ಶ್ರೀ ಎಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) :

ಅ) ಪ್ರಾರಂಭದಿಂದ ರೂ. 1647.90 ಲಕ್ಷಗಳು ಬಿಡುಗಡೆಯಾಗಿದೆ.

ಆ) 3/2000ದವರೆಗೆ ಆದ ಖರ್ಚು ರೂ. 1647.90 ಲಕ್ಷಗಳು .

ಇ) ಇಲ್ಲ.

ಈ) ರಸಲ್‌ಪುರ ಗ್ರಾಮದ ಸರ್ವೆ ನಂ. 30ರಲ್ಲಿ 300 ಮೀ. ಕಾಲುವೆ ಆಗೆತದ ಕೆಲಸ ಬಾಕಿ ಉಳಿದಿರುತ್ತದೆ.

ಉ) 2000-2001 ಸಾಲಿನ ಆಯವ್ಯಯದಲ್ಲಿ ರೂ. 100 ಲಕ್ಷ ಒದಗಿಸಲಾಗಿದೆ.